# <u>ಮಂಗಳೂರು ವಿಶ್ವವಿದ್ಯಾನಿಲಯ</u>

**ದಿನಾಂಕ 30.12.2019 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2019ನೇ ಸಾಲಿನ ಎಂಟನೆಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

**ಅನುಪಸ್ಥಿತ ಸದಸ್ಯರು:**

## <u>ಪ್ರಾರಂಭಿಕ</u>

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ದ ಪ್ರಕರಣ 28(1)(ಜಿ) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ಸದಸ್ಯರಾಗಿ ಅಧಿಸೂಚನೆ ಸಂಖ್ಯೆ: ಇಡಿ 438 ಯುಬಿವಿ 2018(ಭಾಗ–5), ದಿನಾಂಕ 10.12.2019ರಲ್ಲಿ ಸರ್ಕಾರದಿಂದ ನಾಮನಿರ್ದೇಶನಗೊಂಡ,
    - ಶ್ರೀ ವಿವೇಕಾನಂದ ಪನಿಯಾಳ, ಪನಿಯಾಳ ಹೌಸ್, ಕೊಡಿಯಾಳ ಗುತ್ತು ಪೂರ್ವ, ಮುಖ್ಯ ರಸ್ತೆ, ಮಂಗಳೂರು– 575 004
    - ಶ್ರೀ ರವೀಂದ್ರನಾಥ ರೈ, ವಕೀಲರು, ಬಿನ್ ಲೆ॥ ಕ್ಯಾಪ್ಟನ್ ಬಾಲಕೃಷ್ಣ ರೈ ಬಿ.ಎಸ್., ''ಲಕ್ಷ್ಮಿ ನಿವಾಸ'', 3ನೇ ಕ್ರಾಸ್, ಕೊಡಿಯಾಳಗುತ್ತು ಪೂರ್ವ, ಕೊಡಿಯಾಳಬೇಲ್ ಅಂಚೆ, ಮಂಗಳೂರು–3
    - ಡಾ. ಪಾರ್ವತಿ ಅಪ್ಪಯ್ಯ, ''ಹಿಮವನ'' ಮೂಲಿಯಾ ಬಡಾವಣೆ, ಎಫ್.ಎಂ.ಕೆ.ಎಂ.ಸಿ. ಕಾಲೇಜು ಹಿಂಭಾಗ, ಮಡಿಕೇರಿ ಪೋಸ್ಟ್, ಕೊಡಗು ಜಿಲ್ಲೆ.
    - ಶ್ರೀ ರಮೇಶ ಕೆ., #1004, ಮಹಾಬಲೇಶ್ವರ ಕ್ಲಾಸಿಕ್ ರೂಬಿ, ವಾಟರ್ ಟ್ಯಾಂಕ್ ಎದುರುಗಡೆ, ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ, ಶಕ್ತಿನಗರ – 575 016
    - ಡಾ. ಎಂ. ಎಸ್. ತಳವಾರ, ನಂ.777, ''ಜೇನುಗೂಡು'', ಬನಶಂಕರಿ, 6ನೇ ಹಂತ, 5ನೇ ಬ್ಲಾಕ್, ಮೆಟ್ಟಕಲ್ಲಪಾಳ್ಯ, ಬೆಂಗಳೂರು–560 022
    - ಶ್ರೀ ಮೋಹನ್ ಪಡಿವಾಳ್, ''ಸಮೀಧ'', M/s ತೆಲ್ಲಾರ್ ರಸ್ತೆ, ಕಾರ್ಕಳ, ಉಡುಪಿ ಜಿಲ್ಲೆ – 574 104

    ಇವರುಗಳನ್ನು ಮಾನ್ಯ ಕುಲಪತಿಯವರು ಸಭೆಗೆ ಪರಿಚಯಿಸಿ ಸ್ವಾಗತಿಸಿದರು.

2. ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾಗಿದ್ದ ಪ್ರೊ. ಬಿ. ಸುರೇಂದ್ರ ರಾವ್ ಇವರು ದಿನಾಂಕ 10.12.2019ರಂದು ದೈವಾಧೀನರಾಗಿರುತ್ತಾರೆ. ಸದರಿಯವರು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕಾರ 28.02.2007 ರಿಂದ 12.09.2007 ರ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ವಿಶ್ವವಿದ್ಯಾನಿಲಯದ ಆಡಳಿತ ಮತ್ತು ಶೈಕ್ಷಣಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಅಲ್ಲದೆ ಇವರು ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಹಾಗೂ 13.09.2005 ರಿಂದ 12.09.2006 ಮತ್ತು 13.09.2006 ರಿಂದ 12.09.2007ರ ಅವಧಿಯಲ್ಲಿ ಶೈಕ್ಷಣಿಕ ಮಂಡಳಿ ಸದಸ್ಯರಾಗಿ, ಕಲಾ ನಿಕಾಯದ ಡೀನರಾಗಿ, ವಿಶ್ವವಿದ್ಯಾನಿಲಯದ ವಿವಿಧ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿ ಶೈಕ್ಷಣಿಕ ಬೆಳವಣಿಗೆಗೆ ಅಪಾರ ಶಕ್ತಿಯನ್ನು ಧಾರೆ ಎರೆದಿರುತ್ತಾರೆ. ಇವರ ನಿಧನಕ್ಕೆ ಮಂಗಳೂರು ವಿಶ್ವವಿದ್ಯಾನಿಲಯ ಮತ್ತು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯು ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತಾ, ಅಗಲಿದ ದಿವ್ಯಾತ್ಮಕ್ಕೆ ಪರಮಾತ್ಮನು ಚಿರಶಾಂತಿಯನ್ನು ನೀಡಲೆಂದೂ ಹಾಗೂ ಇವರ ಅಗಲಿಕೆಯ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಕುಟುಂಬದವರಿಗೆ ಹಾಗೂ ಶಿಷ್ಯವರ್ಗಕ್ಕೆ ನೀಡಲಿ ಎಂದು ಕೋರುವ ಈ ಸಂತಾಪ ಸೂಚಕ ನಿರ್ಣಯವನ್ನು ಸಿಂಡಿಕೇಟ್ ಸಭೆಯಲ್ಲಿ ಅಂಗೀಕರಿಸಲಾಯಿತು.

**I ನಡಾವಳಿಗಳ ದೃಢೀಕರಣ:**

ದಿನಾಂಕ 09.12.2019ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ಏಳನೆಯ ಸಾಮಾನ್ಯ ಸಭೆಯ ನಡಾವಳಿಗಳಲ್ಲಿ ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.7:22(2019)ಯ ಮಂಗಳೂರು ವಿಶ್ವವಿದ್ಯಾನಿಲಯದ ಬೋಧಕೇತರ ಹುದ್ದೆಗಳ (ಆಡಳಿತ, ಲಿಪಿಕ ಮತ್ತು ಇನ್ನಿತರ ಬೋಧಕೇತರ ಹುದ್ದೆಗಳ) ವೃಂದ ಮತ್ತು ನೇಮಕಾತಿ ನಿಯಮಗಳ ಕ್ರೋಡೀಕೃತ ಪರಿನಿಯಮದ ಕ್ರಮ ಸಂಖ್ಯೆ: 25ನ್ನು ಈ ಕೆಳಗಿನ ತಿದ್ದುಪಡಿಯೊಂದಿಗೆ ದೃಢೀಕರಿಸಲಾಯಿತು.

| Sl. No. | Category | Sanctioned Post | Minimum Qualification | Period of Probation | Method of Recruitment |
|---|---|---|---|---|---|
| 1 | 2 | 3 | 4 | 5 | 6 |
| 25 | **Senior Assistants**<br><br>(Pay Scale: Rs.37900-950-39800-1100-46400-1250-53900-1450-62600-1650-70850/-) | 8 | **For First Division Clerks:**<br>i). Must have put in a continuous service of not less than five years.<br><br>ii). Must have passed the Advance Grade Departmental Examination.<br><br>**For Stenographers:**<br>i). Must have put in a continuous service of not less than five years.<br><br>ii). Must have passed the Advance Grade Departmental Examination. | -- | 1. By Promotion from among the First Division Clerks and Stenographers on the basis of seniority-cum-merit including pass in Service Examination prescribed for the post if any.<br><br>2. The ratio for promotion between the First Division Clerks and Stenographer shall be 4:1 respectively.<br><br>3. If necessary the services of the persons of equal cadre from the Government or other semi Government bodies including the other Universities may be obtained on deputation.<br><br>4. If no eligible candidate is available in either cadre as per ratio, eligible candidate from either cadre may be considered for promotion. |

**II ಅನುಸರಣಾ ವರದಿಯ ಅನುಮೋದನೆ:**

ದಿನಾಂಕ 07.11.2019 ರಂದು ನಡೆದ ಸಿಂಡಿಕೇಟಿನ 2019ನೇ ಸಾಲಿನ ಆರನೆಯ ಸಾಮಾನ್ಯ ಸಭೆಯ ನಿರ್ಣಯಯಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು:ಸಾ.ಸ.8:01(2019)

**ವಿಷಯ:** ಪದವಿ ಮಟ್ಟದ ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಬಗ್ಗೆ.

**ನಿರ್ಣಯ:** ಪದವಿ ಮಟ್ಟದ ಇಂಟೀರಿಯರ್ ಡಿಸೈನ್ ಮತ್ತು ಡೆಕೋರೇಶನ್ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ:ಸಾ.ಸ.8:02(2019)

**ವಿಷಯ:** ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NME-ICT ಯೋಜನೆಯಡಿ ಭಾರತ ಸಂಚಾರ ನಿಗಮ ಲಿ., (BSNL) ನಿಂದ ಪಡೆದ 1 Gbps Internet Connectivity ಯ ಶುಲ್ಕ ಪಾವತಿ ಬಗ್ಗೆ.

**ನಿರ್ಣಯ:** ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯದ NME-ICT ಯೋಜನೆಯಡಿ ಭಾರತ ಸಂಚಾರ ನಿಗಮ ಲಿ., (BSNL) ನಿಂದ ಪಡೆದ 1 Gbps Internet Connectivity ಯ ಶುಲ್ಕವನ್ನು ಪಾವತಿ ಮಾಡುವ ಬಗೆಗಿನ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ: ಸಾ.ಸ.8:03(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷಾ ಕಾರ್ಯಗಳಿಗೆ ಪಾವತಿಸುವ ಸಂಭಾವನೆ, ದಿನಭತ್ಯೆ ಮತ್ತಿತರ ಭತ್ಯೆಗಳ ದರ ಪರಿಷ್ಕರಿಸುವ ಬಗ್ಗೆ.

**ನಿರ್ಣಯ:** ದಿನಾಂಕ 04.12.2019ರಂದು ಪರೀಕ್ಷಾ ಕಾರ್ಯಗಳ ಸಂಭಾವನೆ ಪರಿಷ್ಕರಣೆ ಬಗ್ಗೆ ನಡೆದ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷಾ ಕಾರ್ಯಗಳಿಗೆ ಪಾವತಿಸುವ ಸಂಭಾವನೆ, ದಿನಭತ್ಯೆ ಮತ್ತಿತರ ಭತ್ಯೆಗಳ ದರ ಪರಿಷ್ಕರಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ :ಸಾ.ಸ.8:04(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿಗೆ ಅಗತ್ಯವಿರುವ ವಿದ್ಯಾರ್ಥಿ ಮೇಜು ಮತ್ತು ಕುರ್ಚಿಗಳನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು, ಮಂಗಳಗಂಗೋತ್ರಿ ಇಲ್ಲಿಗೆ ಅಗತ್ಯವಿರುವ ವಿದ್ಯಾರ್ಥಿ ಮೇಜು ಮತ್ತು ಕುರ್ಚಿಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು :ಸಾ.ಸ.8:05(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಡಾ. ನಿರ್ಮಲ್ ರಾಜು, ಪ್ರಾಧ್ಯಾಪಕರು ಇವರನ್ನು ದಿನಾಂಕ 01.01.2020ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗಾಗಿ ಅಥವಾ ಮುಂದಿನ ಆದೇಶದವರೆಗೆ ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ :ಸಾ.ಸ.8:06(2019)

**ವಿಷಯ:** ದಿನಾಂಕ 01.07.2019ರವರೆಗಿನ ಬಿ.ಎ/ಬಿ.ಎಸ್ಸಿ./ಬಿ.ಕಾಂ./ಬಿ.ಎಸ್.ಡಬ್ಲ್ಯು/ಬಿ.ಎಡ್./ಬಿ.ಎ.(ಹೆಚ್.ಆರ್.ಡಿ.)/ ಬಿ.ಬಿ.ಎಂ/ಬಿ.ಹೆಚ್.ಎಂ/ಬಿ.ಹೆಚ್.ಎಸ್./ಬಿ.ಸಿ.ಎ/ಬಿ.ಎಸ್ಸಿ. ಫ್ಯಾಷನ್ ಡಿಸೈನ್ ಮತ್ತು ಬಿ.ಎಸ್ಸಿ. ಇಂಟೀರಿಯರ್ ಡಿಸೈನ್ ಆ್ಯಂಡ್ ಡೆಕೋರೇಶನ್/ಬಿ.ಪಿ.ಎಡ್/ಬಿ.ಎಸ್ಸಿ (ಎಫ್.ಎನ್.ಡಿ)/ಬಿಎ. ಸೆಕ್ಯೂರಿಟಿ ಆ್ಯಂಡ್ ಡಿಟೆಕ್ಟಿವ್ ಸೈನ್ಸ್/ಸ್ಪೀಚ್ ಆ್ಯಂಡ್ ಹಿಯರಿಂಗ್ ಪದವಿ ಕೋರ್ಸಿಗೆ ಸಂಬಂಧಿಸಿದಂತೆ ಅಧ್ಯಾಪಕರ ಜ್ಯೇಷ್ಠತಾ ಪಟ್ಟಿ ಅನುಮೋದನೆ ಕುರಿತು.

**ನಿರ್ಣಯ:** ಅಧ್ಯಾಪಕರ ಜ್ಯೇಷ್ಠತಾ ಪಟ್ಟಿಯನ್ನು ಅನುಮೋದಿಸಲಾಯಿತು. ಈ ಬಗ್ಗೆ ಯಾರಿಂದಾದರೂ ಆಕ್ಷೇಪಣೆಗಳು/ವ್ಯತ್ಯಾಸಗಳು ಕಂಡುಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು. ಮುಂದೆ ಈ ಬಗ್ಗೆ ಯಾವುದೇ ಅಧ್ಯಾಪಕರಿಂದ ದಾವೆಗಳು ಬಾರದ ಹಾಗೆ ನೋಡಿಕೊಳ್ಳುವಂತೆ ಕುಲಸಚಿವರು (ಪರೀಕ್ಷಾಂಗ) ಇವರಿಗೆ ತಿಳಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.8:07(2019)

**ವಿಷಯ:** ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಡಾ. ದಶರಥ ಪಿ. ಅಂಗಡಿ ಇವರು ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿರುವುದಕ್ಕೆ ಘಟನೋತ್ತರ ಅನುಮತಿ ನೀಡಲು ನಿರ್ಣಯಿಸಲಾಯಿತು. ಸದರಿಯವರು ಸಮ್ಮೇಳನದಲ್ಲಿ ಭಾಗವಹಿಸಲು ಪ್ರಯಾಣಿಸಿದ ಬಾಬ್ತು ರೂ.50,000/–ನ್ನು ಪಾವತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:08(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "ICSI Signature Award" ಹೆಸರಿನಲ್ಲಿ ಚಿನ್ನದ ಪದಕ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ICSI ಸಂಸ್ಥೆಯವರು ಅವರೇ ಚಿನ್ನದ ಪದಕ ತಯಾರಿಸಿ ಕೊಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಇತರ ದಾನಿಗಳಿಗೆ ಕನಿಷ್ಠ ಮೊತ್ತ ಹಾಗೂ ಕಾಲಮಿತಿ ನಿಗದಿಪಡಿಸಿ ಪತ್ರ ಬರೆಯಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:09(2019)

**ವಿಷಯ:** Dept. of Physics – DST FIST Programme – ಉಪಕರಣಗಳ ಖರೀದಿಯ ಬಗ್ಗೆ.

**ನಿರ್ಣಯ:** ದಿನಾಂಕ 09.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಭೌತಶಾಸ್ತ್ರ ವಿಭಾಗದ DST FIST Programmeನಡಿ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:10(2019)

**ವಿಷಯ:** Indira Gandhi Centre for Atomic Research (IGCAR), Kalpakkam ಇವರೊಂದಿಗೆ ಜಂಟಿ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** Indira Gandhi Centre for Atomic Research (IGCAR), Kalpakkam ಇವರೊಂದಿಗೆ ಜಂಟಿ ಸಂಶೋಧನಾ ಕಾರ್ಯಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:11(2019)

**ವಿಷಯ:** Father Muller Resarch Centre, Mangalore ಇವರೊಂದಿಗೆ ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** Father Muller Resarch Centre, Mangalore ಇವರೊಂದಿಗೆ ಸಂಶೋಧನಾ ಸಹಕಾರಕ್ಕೆ ಸಂಬಂಧಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಗೆ ಒಡಂಬಡಿಕೆಯ Arbitration Clause ನಲ್ಲಿ ತಿದ್ದುಪಡಿಗಳನ್ನು ಅಳವಡಿಸಿ ಒಡಂಬಡಿಕೆ ಮಾಡಿಕೊಳ್ಳುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:12(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತಾವಿತ ಸೆಂಟ್ರಲೈಸ್ಡ್ ಕಂಪ್ಯೂಟರ್ ಲ್ಯಾಬ್‌ಗೆ ಧಾರಣಾಗುತ್ತಿಗೆ ದರದಲ್ಲಿ ಇಂಟರ್‌ನೆಟ್ ಪ್ಯಾಂಟ್ ಅಳವಡಿಕೆ ವೆಚ್ಚಕ್ಕೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತಾವಿತ ಸೆಂಟ್ರಲೈಸ್ಡ್ ಕಂಪ್ಯೂಟರ್ ಲ್ಯಾಬ್‌ಗೆ ಧಾರಣಾಗುತ್ತಿಗೆ ದರದಲ್ಲಿ ಇಂಟರ್‌ನೆಟ್ ಪ್ಯಾಂಟ್ ಅಳವಡಿಕೆ ವೆಚ್ಚಕ್ಕೆ ಮಂಜೂರಾತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:13(2019)

**ವಿಷಯ:** BRNS –CRP-2- Quartz work tube for Pyrolyser system ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ BRNS –CRP-2 ಪ್ರಾಜೆಕ್ಟ್‌ನ ಸಂಶೋಧನಾ ಕೆಲಸ ಕಾರ್ಯಗಳಿಗೆ ಅಗತ್ಯವಿರುವ Quartz work tube for Pyrolyser system ನ್ನು ಖರೀದಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.8:14(2019)

**ವಿಷಯ:** BRNS CRP – CARER ಕೇಂದ್ರದ ಪ್ರಯೋಗಾಲಯದ ಉಪಕರಣಗಳ ವಾರ್ಷಿಕ ನಿರ್ವಹಣೆಗೆ ಮತ್ತು Software Upgradation ಸಂಬಂಧಿಸಿದ ಪ್ರಸ್ತಾವನೆಗಳ ಮಂಜೂರಾತಿ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ BRNS CRP – CARER ಕೇಂದ್ರದ ಪ್ರಯೋಗಾಲಯದ ಉಪಕರಣಗಳ ವಾರ್ಷಿಕ ನಿರ್ವಹಣೆಗೆ ಮತ್ತು Software Upgradation ಸಂಬಂಧಿಸಿದ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.8:15(2019)

**ವಿಷಯ:** Dept. of Physics – DST FIST Programme - ಉಪಕರಣಗಳ ಖರೀದಿಯ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಭೌತಶಾಸ್ತ್ರ ವಿಭಾಗದ DST FIST Programmeನಡಿ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ : ಸಾ.ಸ.8:16(2019)

**ವಿಷಯ:** Dept. of Physics – DST FIST Programme - ಉಪಕರಣಗಳ ಖರೀದಿಯ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಭೌತಶಾಸ್ತ್ರ ವಿಭಾಗದ DST FIST Programmeನಡಿ ಅಗತ್ಯವಿರುವ ಉಪಕರಣಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.8:17(2019)

**ವಿಷಯ:** ಜೀವರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಅಳುವಾರ – Double Beam UV- Visible Spectrophotometer ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ ಜೀವರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ, ಚಿಕ್ಕ ಅಳುವಾರ ಇಲ್ಲಿಗೆ Double Beam UV- Visible Spectrophotometer ಉಪಕರಣ ಖರೀದಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ :ಸಾ.ಸ.8:18(2019)

**ವಿಷಯ:** UGC-SAP ಯೋಜನೆ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ – ವಿಡಿಯೋ ಕ್ಯಾಮರಾ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ದಿನಾಂಕ 24.12.2019 ರಂದು ನಡೆದ ಖರೀದಿ ಸಮಿತಿಯ ಶಿಫಾರಸ್ಸಿನಂತೆ UGC-SAP ಯೋಜನೆ, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ ಇಲ್ಲಿಗೆ ವಿಡಿಯೋ ಕ್ಯಾಮರಾ ಖರೀದಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ : ಸಾ.ಸ.8:19(2019)

**ವಿಷಯ:** ಬೆರಳಚ್ಚುಗಾರ–ವ–ಗುಮಾಸ್ತ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ವೃಂದ ಬದಲಾವಣೆಗೊಳಿಸುವ ಬಗ್ಗೆ.

**ನಿರ್ಣಯ:** ಶ್ರೀಮತಿ ಚಂಪಾ ಕೆ., ಬೆರಳಚ್ಚುಗಾರ್ತಿ–ವ–ಗುಮಾಸ್ತೆ ಇವರಿಗೆ ಬೆರಳಚ್ಚುಗಾರ–ವ–ಗುಮಾಸ್ತ ಹುದ್ದೆಯಿಂದ ದ್ವಿತೀಯ ದರ್ಜೆ ಸಹಾಯಕ ಹುದ್ದೆಗೆ ವೃಂದ ಬದಲಾವಣೆ ಹೊಂದಲು ಅನುಮತಿ ನೀಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ : ಸಾ.ಸ.8:20(2019)

**ವಿಷಯ:** ದಿನಾಂಕ 01.01.2006 ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಎಡ್ವಾನ್ಸ್‌ಮೆಂಟ್ ಸ್ಕೀಂ ಪ್ರಕಾರ ವಿಶ್ವವಿದ್ಯಾನಿಲಯ/ಸ್ನಾತಕೋತ್ತರ ಕೇಂದ್ರದ ಬೋಧಕರಿಗೆ ಮುಂಬಡ್ತಿ–ಸ್ಕ್ರೀನಿಂಗ್–ಕಂ–ಇವ್ಯಾಲ್ಯುವೇಶನ್/ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಸ್ಕ್ರೀನಿಂಗ್–ಕಂ–ಇವ್ಯಾಲ್ಯುವೇಶನ್ ಸಮಿತಿ/ಆಯ್ಕೆ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ :ಸಾ.ಸ.8:21(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರಕ್ಕೆ ಶುಚಿತ್ವ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ನಿರ್ವಹಿಸುವ ಬಗ್ಗೆ.

**ನಿರ್ಣಯ:** ಟೆಂಡರ್ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣ, ಘಟಕ ಕಾಲೇಜುಗಳು ಹಾಗೂ ಸ್ನಾತಕೋತ್ತರ ಕೇಂದ್ರಕ್ಕೆ ಶುಚಿತ್ವ ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗೆಗಿನ Shashikantha M K (Sri Ranganatha Enterprises), Mysuru ಇವರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ : ಸಾ.ಸ.8:22(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣ ಹಾಗೂ ಘಟಕ ಕಾಲೇಜುಗಳಿಗೆ ಗ್ರೂಪ್ 'ಡಿ' ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ನಿರ್ವಹಿಸುವ ಬಗ್ಗೆ.

**ನಿರ್ಣಯ:** ಟೆಂಡರ್ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣ ಹಾಗೂ ಘಟಕ ಕಾಲೇಜುಗಳಿಗೆ ಗ್ರೂಪ್ 'ಡಿ' ನೌಕರರ ಸೇವೆಯನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗೆಗಿನ Shashikantha M K (Sri Ranganatha Enterprises), Mysuru ಇವರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ : ಸಾ.ಸ.8:23(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ತೋಟಗಾರಿಕೆ ನಿರ್ವಹಣೆಗಾಗಿ ತೋಟಗಾರಿಕಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಬಳಸಿಕೊಳ್ಳುವ ಬಗ್ಗೆ.

**ನಿರ್ಣಯ:** ಟೆಂಡರ್ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯ ಆವರಣದ ತೋಟಗಾರಿಕೆ ನಿರ್ವಹಣೆಗಾಗಿ ತೋಟಗಾರಿಕಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಒದಗಿಸುವ ಬಗೆಗಿನ Shashikantha M K (Sri Ranganatha Enterprises), Mysuru ಇವರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಆಡಳಿತ : ಸಾ.ಸ.8:24(2019)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿ ಆವರಣ, ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು, ವಿಶ್ವವಿದ್ಯಾನಿಲಯ ಕಾಲೇಜು ನೆಲ್ಯಾಡಿ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಂಡಿಕೇರಿ ಮತ್ತು ಜ್ಞಾನಕಾವೇರಿ ಮಂಗಳೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇದ್ರ ಚಿಕ್ಕ ಅಳುವಾರ ಇಲ್ಲಿಗೆ ಭದ್ರತಾ ವ್ಯವಸ್ಥೆಯ ಗುತ್ತಿಗೆ ನೀಡುವ ಬಗ್ಗೆ.

**ನಿರ್ಣಯ:** ಟೆಂಡರ್ ಸಮಿತಿಯ ಶಿಫಾರಸ್ಸಿನಂತೆ ಮಂಗಳೂರು ವಿಶ್ವವಿದ್ಯಾನಿಲಯದ ಮಂಗಳಗಂಗೋತ್ರಿ ಆವರಣ, ವಿಶ್ವವಿದ್ಯಾನಿಲಯ ಕಾಲೇಜು ಮಂಗಳೂರು, ವಿಶ್ವವಿದ್ಯಾನಿಲಯ ಕಾಲೇಜು ನೆಲ್ಯಾಡಿ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು, ಮಡಿಕೇರಿ ಮತ್ತು ಜ್ಞಾನಕಾವೇರಿ, ಮಂಗಳೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿಗೆ ಭದ್ರತಾ ವ್ಯವಸ್ಥೆಯ ಗುತ್ತಿಗೆಯನ್ನು Shashikantha M K (Sri Ranganatha Enterprises), Mysuru ಇವರಿಗೆ ನೀಡಲು ನಿರ್ಣಯಿಸಲಾಯಿತು.

ಸದರಿಯವರ ಜೊತೆಗಿನ ಒಪ್ಪಂದದಲ್ಲಿ ಹೆಚ್ಚುವರಿಯಾಗಿ ವಿಶ್ವವಿದ್ಯಾನಿಲಯದ ಹಾಗೂ ಕಾರ್ಮಿಕರ ಹಿತದೃಷ್ಠಿ ಕಾಪಾಡುವ ಷರತ್ತುಗಳನ್ನು ಅಳವಡಿಸಲು ನಿರ್ಣಯಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |